ದಿನಾಂಕ 20.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಅರ್ಜಿದಾರರ ಪರ ವಕೀಲರಾದ ಶ್ರೀ.ಕೆ.ಪಿ.ಬಿ. ರವರಿಂದಃ-**

ಅಸಲು ದಾವಾ ಸಂಖ್ಯೆ 66/1999 ರಲ್ಲಿನ ಸಮನ್ಸ್ ಅನ್ನು ಅರ್ಜಿದಾರರ ತಂದೆ ಪಡೆದುಕೊಂಡ ಬಳಿಕ ಏನು ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನಾವು ಮತ್ತು 8 ನೇ ಎದುರುದಾರರು ಅನ್ಯೋನ್ಯವಾಗಿದ್ದೇವೆ. ನಾನು ಮತ್ತು 8 ನೇ ಎದುರುದಾರರು ಅರ್ಜಿದಾರರ ತಂದೆಗೆ ಇದ್ದ ಮದ್ಯಪಾನದ ಚಟವನ್ನು ದುರಪಯೋಗ ಪಡಿಸಿಕೊಂಡು ಈ ಅರ್ಜಿಯ ಅರ್ಜಿದಾರರರಿಗೆ ಸಮನ್ಸ್ ನ ವಿಚಾರ ತಿಳಿಸಲು ಅವಕಾಶ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ನಿಶಾನೆ ಆರ್. 1 ರಿಂದ 16 ರ ದಾಖಲೆಗಳನ್ನು ಅರ್ಜಿದಾರರು ನಿಟ್ಟೂರು ಗ್ರಾಮದಲ್ಲಿ 1998-2003 ವರೆಗೆ ವಾಸವಾಗಿದ್ದರು ಎಂಬುದನ್ನು ತೋರಿಸಲು ಹಾಜರುಪಡಿಸಿರುತ್ತೇನೆ. ನಿಶಾನೆ ಆರ್. 1 ರಿಂದ 16 ದಾಖಲೆಗಳು ಅಸಲು ದಾವಾ ಸಂಖ್ಯೆ 66/1999 ನ್ನು ಸಲ್ಲಿಸುವುದಕ್ಕಿಂತ ಮುಂಚಿನ ದಾಖಲೆಗಳು ಎಂದರೆ ಸರಿ. ನಿಶಾನೆ ಆರ್. 33 ನ್ನು ನಾನು ಓದಿರುವುದಿಲ್ಲ.

ನಾನು ಹಾಜರುಪಡಿಸಿರುವ ದಾಖಲೆಗಳಿಗೂ ಈ ಪ್ರಕರಣಕ್ಕೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.